ಡಾಕ್ಟರ್ ಇಂಗ್ಲಿಷ್‌ನಲ್ಲಿ ಯಾವುದೋ ರೋಗದ ಹೆಸರನ್ನು ಹೇಳಿದರು; ಆತನಿಗೆ ಅರ್ಥವಾಗಲಿಲ್ಲ, ನೆನಪುಳಿಯಲಿಲ್ಲ. ಆದರೆ, ಆತನಿಗೆ ತಿಳಿದ ವಿಷಯವೆಂದರೆ, ಈ ರೋಗ ತಗುಲಿದ ನೂರು ಜನರಲ್ಲಿ ಒಂದಿಬ್ಬರು ಮಾತ್ರ ಬದುಕುಳಿಯಬಹುದು. ಡಾಕ್ಟರಿಗೆ ಧನ್ಯವಾದ ತಿಳಿಸಿ, ಅಲ್ಲಿಂದ ಹೊರಬಂದ.

‘ಈ ಡಾಕ್ಟರ್ ಹೀಗೆ ಹೇಳಬಹುದು; ಮುಂಬೈನ ಡಾಕ್ಟರ್ ಬಳಿಯೇ ನಂತರ ಮಾತನಾಡಿದರಾಯಿತು. ದುಡ್ಡಿದ್ದರೆ, ಬೇಕಾದಷ್ಟು ಉತ್ತಮ ಆಸ್ಪತ್ರೆಗಳಿವೆ...’ ಮನಸ್ಸಿನಲ್ಲಿಯೇ ಆತ ಯಾವುದೋ ನಿರ್ಧಾರಕ್ಕೆ ಬಂದಿದ್ದ; ಕೋಟ್ಯಧಿಪತಿಯಲ್ಲವೇ!

ಆತ ಈಗ ಒಬ್ಬ ಪ್ರಯಾಣಿಕರನ್ನು ಕರೆದುಕೊಂಡು ಪೊಲೀಸ್ ಠಾಣೆಯ ಬಳಿಗೆ ಕರೆತಂದು ಬಿಟ್ಟ. ಅಲ್ಲಿಂದ ಮುಂದಕ್ಕೆ ಹೊರಡಬೇಕೆನ್ನುವಷ್ಟರಲ್ಲಿ ಯಾರೋ ‘‘ಆಟೊ...’’ ಎಂದಂತಾಯಿತು. ಒಂದು ಕ್ಷಣ ಆತನ ಎದೆಬಡಿತವೇ ನಿಂತಂತಾಯಿತು. ಕಾರಣ, ಆತ ಆಟೊದಲ್ಲಿ ಬ್ಯಾಗ್ ಬಿಟ್ಟುಹೋಗಿದ್ದ ಕಾಂಕೇ ವ್ಯಕ್ತಿಯಾಗಿದ್ದ! ಆದರೆ ಆ ವ್ಯಕ್ತಿ ಅಮನ್‌ನನ್ನು ಗುರುತಿಸಲಿಲ್ಲ. ಅಷ್ಟೇ ಅಲ್ಲ, ಒಬ್ಬ ವ್ಯಕ್ತಿ ಕೇವಲ ಇಪ್ಪತ್ನಾಲ್ಕು ತಾಸುಗಳಲ್ಲಿ ಇಷ್ಟೊಂದು ಬದಲಾಗುವುದು ಸಾಧ್ಯವೇ ಎನ್ನುವ ಮಟ್ಟಿಗೆ ಬದಲಾಗಿದ್ದ; ವರ್ಷಗಟ್ಟಲೆ ರೋಗಕ್ಕೆ ತುತ್ತಾದ ವ್ಯಕ್ತಿಯಂತೆ ಕಂಡುಬಂದ. ‘ಆತನನ್ನು ಬಿಟ್ಟು ಆಟೊವನ್ನು ಮುಂದಕ್ಕೆ ಓಡಿಸಿಬಿಡಲೇ’ ಎನ್ನುವ ಭಾವನೆ ಮೂಡಿದರೂ, ಹಾಗೆ ಮಾಡುವುದರಿಂದ ನೋಡಿದವರಲ್ಲಿ ಅನುಮಾನ ಮೂಡಬಹುದು ಎನ್ನಿಸಿ, ಆಟೊವನ್ನು ಆ ವ್ಯಕ್ತಿಯ ಬಳಿಯಲ್ಲಿ ನಿಲ್ಲಿಸಿದ ಮತ್ತು ಆತನನ್ನು ಆಟೊದೊಳಗೆ ಹತ್ತಿಸಿಕೊಂಡ.

‘‘ಕಾಂಕೇ ಚಲೋ...’’ (ಕಾಂಕೇಗೆ ನಡೆ)

ಆ ವ್ಯಕ್ತಿ ತನ್ನನ್ನು ಗುರುತಿಸಿಲ್ಲ ಎಂದು ಅಮನ್‌ಗೆ ಖುಷಿಯೋ ಖುಷಿ. ಸ್ವಲ್ಪ ದೂರ ಕ್ರಮಿಸಿದ

